**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ.313/2020</u>**

<u>ಪಿರ್ಯಾದುದಾರರು</u> ಃ ಸರ್ಕಾರದ ಪರವಾಗಿ ಬೀರೂರು ಪೊಲೀಸರಿಂದ

-ವಿರುದ್ಧ-

<u>ಆರೋಪಿತರು</u> ಃ ಅಜ್ಮಲ್ ಪಾಷಾ ಬಿನ್ ಅಪ್ಸರ್ ಪಾಶಾ, 28 ವರ್ಷ, ಡ್ರೈವರ್ ಕೆಲಸ, ವಾಸ-ಮಾಡಿಯಮ್ಮ ದೇವಸ್ಥಾನದ ಹತ್ತಿರ, 31 ಎಕರೆ, ಕಡೂರು ಪಟ್ಟಣ, ಚಿಕ್ಕಮಗಳೂರು ಜಿಲ್ಲೆ.

<u>-ಃಆಪಾದನೆಃ-</u>

ದಿನಾಂಕಃ 06.12.2019 ರಂದು ಸಂಜೆ 7.00 ರ ಸಮಯದಲ್ಲಿ ಬೀರೂರು ಠಾಣಾ ಸರಹದ್ದಿಗೆ ಸೇರಿದ ಕಾಮನಕೆರೆ ಗ್ರಾಮದ ಪ್ರೌಡಶಾಲೆಯ ಮುಂಭಾಗ ಆರೋಪಿಯಾದ ನೀವು ತಮ್ಮಟದಹಳ್ಳಿ ಗೇಟಿನಿಂದ ಕಡೂರಿಗೆ ಹೋಗುವ ರಸ್ತೆಯಲ್ಲಿ ನಿಮ್ಮ ಬಾಬ್ತು ಕೆಎ-20-ಎನ್-8413 ನೊಂದಣಿ ಸಂಖ್ಯೆಯುಳ್ಳ ಇಂಡಿಕಾ ಕಾರನ್ನು ಸಾರ್ವಜನಿಕ ರಸ್ತೆಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಹಾಗೂ ನಿರ್ಲಕ್ಷ್ಯತನದಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿ ಚಾಸಾ-1 ರವರ ತಮ್ಮ ಮೃತ ಕೃಷ್ಣಮೂರ್ತಿ ಚಲಾಯಿಸುತ್ತಿದ್ದ ಕೆಎ-66/ಜೆ-2109 ರ ಸಂಖ್ಯೆಯ ಬೈಕಿಗೆ ಡಿಕ್ಕಿ ಹೊಡೆಸಿದ್ದೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-20-ಎನ್-8413 ನೊಂದಣಿ ಸಂಖ್ಯೆಯುಳ್ಳ ಇಂಡಿಕಾ ಕಾರಿನಿಂದ ಅಜಾಗರೂಕತೆಯಿಂದ ಹಾಗೂ ನಿರ್ಲಕ್ಷ್ಯತನದಿಂದ ಮೃತ ಕೃಷ್ಣಮೂರ್ತಿ ಚಲಾಯಿಸುತ್ತಿದ್ದ ಕೆಎ-66/ಜೆ-2109 ರ ಸಂಖ್ಯೆಯ ಬೈಕಿಗೆ ಡಿಕ್ಕಿ ಹೊಡೆಸಿದರಿಂದ, ಕೃಷ್ಣಮೂರ್ತಿ ರಸ್ತೆಯ ಮೇಲೆ ಬಿದ್ದು, ಬಲಗಣ್ಣಿನ ಕೆಳಗೆ ಮತ್ತು ತಲೆಗೆ ಪೆಟ್ಟಾಗಿ

ರಕ್ತಗಾಯವಾಗಿ ಪ್ರಜ್ಞಾಹೀನಾರಾಗಿದ್ದು, ಕಡೂರು, ಶಿವಮೊಗ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದರೂ ಸಹ ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ 07-12-2019 ರಂದು ಮೃತಪಟ್ಟಿರುತ್ತಾರೆ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 304 (ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು, ಅಪಘಾತವಾದ ನಂತರ ಗಾಯಾಳುಗಳಿಗೆ ಚಿಕಿತ್ಸೆಯನ್ನು ಕೊಡಿಸದೆ, ಪೊಲೀಸರಿಗೆ ಮಾಹಿತಿ ನೀಡಿದೆ ಸ್ಥಳದಿಂದ ಪರಾರಿಯಾಗಿರುತ್ತೀರಿ. ಆದ್ದರಿಂದ ನೀವು ಭಾ. ಮೋ. ವಾ. ಕಾ. ಕಲಂ. 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉಃ

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉಃ

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕಃ 25.11.2021 ಸಹಿ/-

**(ದೀಪು ಎಂ.ಟಿ.)**
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಕಡೂರು.